# ವ್ಯರ್ಥವಲ್ಲವೆ, ಜನ್ಮ ವ್ಯರ್ಥವಲ್ಲವೇ?

**ಈ** ವಾಕ್ಯದ ಆಶಯವೇ ಅತ್ಯಂತ ನಿರಾಶದಾಯಕವಾಗಿದೆ. ನಮ್ಮ ಸಹೃದಯ ಓದುಗರಿಗೆ ತಿಳಿದಿರುವಂತೆ ಇದೊಂದು ದಾಸವಾಣಿ. ಅವರ ಜೀವನ ಶ್ರದ್ಧೆ, ನಂಬಿಕೆಯ ಪ್ರಕಾರ ಕೃಷ್ಣನ ಸ್ಮರಣೆ ಮಾಡದಿದ್ದಲ್ಲಿ ಜನ್ಮ ವ್ಯರ್ಥವಾಗುತ್ತದೆ; ಮತ್ತೆ ನಾನಾ ಭಾವಗಳಲ್ಲಿ ಜನಿಸಿ ನೋವುಣ್ಣಬೇಕಾಗುತ್ತದೆ; ಮೋಕ್ಷ ಮತ್ತೆ ಮತ್ತೆ ದೂರವಾಗುತ್ತದೆ. ಆದುದರಿಂದ ಈ ಜನ್ಮ ವ್ಯರ್ಥವಾಗುತ್ತದೆ. ಮನುಷ್ಯ ಜನ್ಮದ ನಿಜವಾದ ಗುರಿಯೇ ಮೋಕ್ಷ ಸಾಧನೆ ಅಥವಾ ಮುಕ್ತಿಯೇ ಆಗಿರುತ್ತದೆ ಎಂಬುದು ಭಾರತೀಯ ಬದುಕಿನ ನಂಬಿಕೆ. ಈ ನಂಬಿಕೆಯನ್ನೇ ದಾಸರು ಹಾಡಿನ ರೂಪದಲ್ಲಿ ಹಾಡಿದ್ದಾರೆ. ಆದರೆ ಮುಕ್ತಿಯ ಗುರಿಯೊಂದನ್ನು ಹೊರತುಪಡಿಸಿ ಈ ಜೀವಕ್ಕೆ ಇನ್ನೇನು ಗೊತ್ತುಗುರಿಗಳಿವೆ? ಜವಾಬ್ದಾರಿಗಳಿಲ್ಲವೆ? ಅದೊಂದೇ ನಿಜವಾದ ಅಂತಿಮ ಗಮ್ಯವೆಂದು ಮಾನವ ಜೀವಸಂಕುಲ ಹೊರಟಿದ್ದರೆ, ಈ ಸಂಸ್ಕೃತಿ, ಈ ನಾಗರಿಕತೆ, ಈ ಜ್ಞಾನ-ವಿಜ್ಞಾನ- ತಂತ್ರಜ್ಞಾನಗಳ ಸೃಷ್ಟಿ ಸಾಧ್ಯವಾಗುತ್ತಿತ್ತೆ? ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ ಹೊರ ಹೊಮ್ಮಿಸಲಾಗುತ್ತಿತ್ತೇ? ಹೆಣ್ಣು, ಮಣ್ಣು, ಹೊನ್ನುಗಳು ಮಾಯೆಯೆಂದೂ ಮೋಕ್ಷ ಸಾಧನೆಗೆ ಅಡ್ಡಿಯೆಂದು ಬಗೆದಿದ್ದರೆ ಮಾನವ ಜೀವಸಂಕುಲ ಇದುವರೆಗೂ ಮುಂದುವರಿದು ಬರುತ್ತಿತ್ತೇ? ಈ ಮಾನವ ಜನ್ಮ ವ್ಯರ್ಥವೆಂದು ಬಗೆದು ಮೊದಲ ಮಾನವರು ಮುಕ್ತಿ ಸಾಧಿಸಿಬಿಟ್ಟು, ಭಗವಂತನ ಸಾನ್ನಿಧ್ಯದಲ್ಲೇ ಭದ್ರವಾಗಿ ನೆಲೆಯೂರಿ ನಿಂತು, 'ಮಧು ಮಧಿರೆ'ಗಳ ಆನಂದ ಪಡೆಯುತ್ತಾ ನಿಂತುಬಿಟ್ಟಿದ್ದರೆ ಏನಾಗುತ್ತಿತ್ತು ಎಂಬುದರ ಕಲ್ಪನೆಯೇ ದಿಗಿಲು ಹುಟ್ಟಿಸುವಂಥದ್ದಲ್ಲವೆ?

ಆದರೆ ಆದದ್ದು ಬೇರೆ! ನೀವು ಮೋಕ್ಷದ ಬಗ್ಗೆ ಮಾತನಾಡುವವರು ಮಾತನ್ನಾಡುತ್ತಲೇ ಇರಿ. ನಾವು ಹುಲುಮಾನವರು ಈ ಬದುಕನ್ನು ಪ್ರೀತಿಸುತ್ತೇವೆ; ಈ ಕಾಡು, ನದಿ, ಗಾಳಿ, ಗಿರಿಶೃಂಗ ಶ್ರೇಣಿಗಳನ್ನು ಪ್ರೀತಿಸುತ್ತೇವೆ; ಅವುಗಳಲ್ಲಿ ಸುಖ ಕಾಣುತ್ತೇವೆ. ಆ ಸುಖವೇ ನಿಜವಾದ ಮೋಕ್ಷ! ಅದೇ ನಿಜವಾದ ಸ್ವರ್ಗ! ಈ ಧರೆಯ ಸ್ವರ್ಗದಲ್ಲಿ ನೀವು ಅಡೆತಡೆಯೆಂದು ಭಾವಿಸಿರುವ ಹೆಣ್ಣುಗಳನ್ನು- ಹಣ್ಣುಗಳನ್ನು ಜೊತೆಯಲ್ಲಿಟ್ಟು ಆನಂದಪಡುತ್ತೇವೆ. ನಮ್ಮ ಈ ಭುವಿಯ ಸ್ವರ್ಗದಲ್ಲಿ ನಿಮ್ಮ ಲೋಕದ ಮೇಲು ಕೀಳುಗಳಿಲ್ಲ, ಸಮಾನತೆಯೇ ಎಲ್ಲ. ನಮ್ಮ ಜೊತೆ ಪ್ರಕೃತಿ ತಾಯಿಯ ಇನ್ನಿತರ ಮಕ್ಕಳಾದ ಪ್ರಾಣಿ ಪಕ್ಷಿಗಳು ಬದುಕುತ್ತವೆ. ಪರರ ಬಗ್ಗೆ ಚಿಂತೆ ಇಲ್ಲದ ನಮಗೆ ನಮ್ಮ ಜನ್ಮ ಎಂದಿಗೂ ವ್ಯರ್ಥವೆನ್ನಿಸುವುದಿಲ್ಲ. ಬದುಕಿನ ಕ್ಷಣ ಕ್ಷಣವೂ ಸಾರ್ಥಕವೆನ್ನಿಸುತ್ತದೆ; ಆನಂದ ದಾಯಕವಾಗಿರುತ್ತದೆ.

ನೀವು ಮೋಕ್ಷದ ಬಗ್ಗೆ ಮಾತನಾಡುವವರು ಸ್ವರ್ಗದಲ್ಲಿ ಕೇವಲ 'ಆನಂದ'ವಿರುತ್ತದೆ. ಅದನ್ನು ಅನುಭವಿಸುವುದೇ ಸ್ವರ್ಗಸುಖ ಎನ್ನುವಿರಿ. ಆದರೆ ಅದು ನಿಮ್ಮ ಕಲ್ಪನೆ; ಕಾಣದ ಕನಸು. ಅದು ದಕ್ಕಿತೋ ಇಲ್ಲವೋ ಕಂಡು ಬಂದವರಿಲ್ಲ. ಆದರೆ ನಮ್ಮದು ಕೈಯಲ್ಲಿರುವ ಪಾರಿವಾಳ; ನಿಮ್ಮದು ಪೊದೆಯಲ್ಲಿರುವ ಪಾರಿವಾಳ, ನಮ್ಮದು ವಾಸ್ತವ, ಸತ್ಯ; ನಿಮ್ಮದು ಅವಾಸ್ತವ, ಭ್ರಮೆ. ಆದುದರಿಂದ ನಮಗನ್ನಿಸುತ್ತದೆ: ನಿಮ್ಮ ಜನ್ಮ ನಿಜಕ್ಕೂ ಇಲ್ಲಿ ವ್ಯರ್ಥ!

ಮಾನವ ಜನ್ಮ ದಾಸರು ಹೇಳುವಂತೆ 'ಬಲು ದೊಡ್ಡದು.' ಶ್ರಮದ ಮೂಲಕ ಪಡುವ ಸುಖ, ಮಕ್ಕಳ ನಗುವಿನ ಮೂಲಕ ಪಡೆಯುವ ತೃಪ್ತಿ, ತಂದೆ ತಾಯಿಗಳ-ಗುರು ಹಿರಿಯರ ಸೇವೆಯಲ್ಲಿ ಕಾಣುವ ಸಾರ್ಥಕ್ಯ- ಇವೆಲ್ಲವೂ ಈ ಜನ್ಮದ ಬೆಲೆಯನ್ನು ಗುರುತಿಸುತ್ತವೆ. ಸ್ವರ್ಗವೆಂಬುದು ಇದ್ದ ಪಕ್ಷದಲ್ಲಿ- ಅಲ್ಲಿ ಇಂಥ ಕೆಲಸಗಳನ್ನು ಮಾಡಲು ಆಗುವುದಿಲ್ಲ. ಸ್ವರ್ಗದ ನೆಲೆಯನ್ನು ಸತ್ಯವೆಂದು ತಿಳಿದು, ಅದಕ್ಕಾಗಿ ಹಂಬಲಿಸುತ್ತಾ ಇಹದ ಸತ್ಯವನ್ನು, ರುಚಿಯನ್ನು ಕ್ಷಣಿಕವೆಂದು ಕರೆವುದು ಎಂಥ ಅಭಾಸವಾಗುತ್ತದೆ?

ಚರಿತ್ರೆಯುದ್ದಕ್ಕೂ ಮಾನವ ಅನೇಕ ಸಾರ್ಥಕ ಕೆಲಸಗಳನ್ನು ಮಾಡುತ್ತಲೇ ಬಂದಿದ್ದಾನೆ. ಬಡವರ ದೀನದಲಿತರ, ಗುಲಾಮರ ನೋವನ್ನು ನಿವಾರಿಸಲು ಹೋರಾಡಿದ್ದಾನೆ. ಥೆರೇಸಾ ಅಂಥ ತಾಯಿಯರು, ಗಾಂಧೀಜಿಯಂಥ ಮಹಾ ಮಾನವರು ನಮ್ಮ ಕಣ್ಮುಂದೆ ಸೇವೆ ಮಾಡಿ ಮಾನವ ಜನ್ಮ ವ್ಯರ್ಥವಲ್ಲವೆಂದು ಸಾರಿ ತಿಳಿಸಿದ್ದಾರೆ. ಹೊಲದಲ್ಲಿ ದುಡಿವ ರೈತ, ಗಿರಣಿಗಳಲ್ಲಿ ಬೆವರು ಸುರಿಸುವ ಕಾರ್ಮಿಕ, ಸ್ವಚ್ಛತೆಯನ್ನು ಮಾಡುವ ಜಲಗಾರ- ಯಾವ ದೇವತೆಗಳಿಗಿಂತಲೂ ಅತ್ಯುತ್ತಮರೆಂದು ನಾವು ಅರಿಯಬೇಕಿದೆ. ಇಂಥವರ ನಡುವೆ ನಾವು ಒಬ್ಬರಾಗಿ ಅವರಂತೆ ಮನುಜ ಸೇವೆ ಮಾಡುತ್ತಾ, ನೋವು ನಿವಾರಣೆಗೆ, ಹಸಿವು ನಿವಾರಣೆಗೆ ಕಿಂಚಿತ್ ಶ್ರಮದ ಸೇವೆ ಮಾಡಿದರೆ ಅದು ಶ್ರೇಷ್ಠ ಬದುಕಾಗುತ್ತದೆ. ಇಂಥ ಮನುಜರನ್ನು, ಬದುಕನ್ನು ಕಂಡೇ ನಮ್ಮ ಅನುಭಾವಿ ಸಂತ ಸರ್ವಜ್ಞ 'ಸ್ವರ್ಗಕ್ಕೆ ಬೆಂಕಿ ಹಾಕ' ಎಂದು ಹೇಳಿರುವುದು.

■ ಶಿಕಾಕು

# ಮಾತೇ ಮುತ್ತು

★ ಒಳ್ಳೆಯ ಗುಣ ಉಳ್ಳವನು ಗುಂಪಿಗೆ ಯೋಗ್ಯನಲ್ಲ! ದೂರದಿಂದ ಅವನಿಗೆ ಹೊಗಳಿಕೆ, ಹತ್ತಿರ ಬಂದರೆ ತೆಗಳಿಕೆ- ಇದೊಂದು ಟ್ರಾಜಿಡಿ.

-ಎಮರ್‌ಸನ್

★ ಇನ್ನೊಬ್ಬರ ಗುಣದಲ್ಲಿ ಆನಂದ ಕಾಣುವುದು ನಿಮ್ಮ ಒಳ್ಳೆಯ ಗುಣ.

-ಜರ್ಮನಿ ಗಾದೆ

★ ಗುಣವನ್ನು ತಿಳಿದರೆ ಸಾಲದು, ಅದನ್ನು ಉಳ್ಳವನಾಗಲು ಯತ್ನಿಸಬೇಕು; ಅದನ್ನು ಅನುಷ್ಠಾನಕ್ಕೆ ತರಬೇಕು.

-ಅರಿಸ್ಟಾಟಲ್

★ ಇದ್ದರೆ ಮಿಥಿಲೆಯ ಸಹೋದರಿಯರಂತಿರಬೇಕು, ಅಯೋಧ್ಯೆಯ ಸಹೋದರರಂತಿರಬೇಕು.

-ಮಹಾಭಾರತ

★ ಜಾತಿ ಸಮಾನತೆಯಲ್ಲಿ ನಂಬಿಗೆ ಇದ್ದು ತಮ್ಮ ಕಾರ್ಯಕ್ಷೇತ್ರದಲ್ಲಿ ಅದನ್ನು ಅನುಷ್ಠಾನಗೊಳಿಸುವವರು ಪ್ರಾಮಾಣಿಕರು. ಜಾತಿ ಬಗ್ಗೆ ಬರೀ ಮಾತನಾಡುತ್ತ ದ್ವೇಷ ಬಿತ್ತುವವರು ಢೋಂಗಿವಾದಿಗಳು.

-ಅನುಭವಾಮೃತ

★ ಮನುಷ್ಯನಿಗೆ ಕೆಲಸ ಇದ್ದರೆ ಆರೋಗ್ಯ ಇರುತ್ತದೆ, ಆರೋಗ್ಯ ಇದ್ದರೆ ಸುಖ ಇರುತ್ತದೆ. ಮಾಡಲು ಕೆಲಸ ಇರಬೇಕೆನ್ನುವುದರಲ್ಲೇ ಆರೋಗ್ಯದ ಗುಟ್ಟು ಇದೆ.

-ಪಾಟೀಲ ಪುಟ್ಟಪ್ಪ

★ ಕೆಲಸವೇ ಒಂದು ವಿದ್ಯೆಯ ಕೇಂದ್ರ. ವಿದ್ಯಾಭ್ಯಾಸವೆಂದರೆ ಪುಸ್ತಕಗಳನ್ನೋದುವುದು ಮಾತ್ರವಲ್ಲ; ನೀವು ಮಾಡುವ ಕೆಲಸ, ಆ ಮೂಲಕ ನಿಮಗೆ ಪ್ರಾಪ್ತವಾಗುವ ಮಾನವೀಯ ಸಂಬಂಧಗಳು- ಇವೆಲ್ಲವೂ ವಿದ್ಯೆಯ ಕೇಂದ್ರಗಳು.

-ಸ್ವಾಮಿ ರಂಗನಾಥಾನಂದ

★ ಕೆಲವರು ಎಷ್ಟು ಓದಿದರೂ ಅಷ್ಟೆ, ಕೆಲಸ ಸಿಕ್ಕುವುದಿಲ್ಲ ಎನ್ನುತ್ತಾರೆ; ಮಿಕ್ಕವರು ಎಷ್ಟು ಓದದೆ ಇದ್ದರೂ ಚಿಂತೆಯಿಲ್ಲ, ಕೆಲಸ ಸಿಕ್ಕುತ್ತದೆ ಎನ್ನುತ್ತಾರೆ.

-ಎ.ಆರ್.ಕೃಷ್ಣಶಾಸ್ತ್ರಿ

★ ಅದು ಎಷ್ಟೇ ಮುಖ್ಯದ್ದಾಗಲಿ, ಮತ್ತೊಬ್ಬರ ಕೆಲಸಕ್ಕಾಗಿ ತಮ್ಮ ಕೆಲಸವನ್ನು ಕೈಬಿಡುವುದು ಮೂರ್ಖತನವೇ ಸರಿ.

-ಗೌತಮ ಬುದ್ಧ

★ 'ಇಷ್ಟ' ಎಂದು ನಿನಗೆ ಅಗತ್ಯ ಇಲ್ಲದ ವಸ್ತುವನ್ನು ಕೊಳ್ಳಬೇಡ.

-ಆಸ್ಕರ್ ವೈಲ್ಡ್

★ ಕೋಪ ಬುದ್ಧಿಗೆ ಕೆಲಸ ಕೊಡುವ ಬದಲು, ಬಾಯಿಗೆ ಕೆಲಸ ಕೊಡುತ್ತದೆ.

-ಎಚ್ ಮ್ಯಾಕೆಂಜಿ

★ ಖ್ಯಾತಿ ಎಂದರೇನೆಂದು ತಿಳಿಯದವನು ಧನ್ಯನು. ಖ್ಯಾತಿ ಬೇಕು ಎನ್ನುವುದೇ ನರಕ.

-ಬಿ.ಇ.ಲಿಟ್ಟನ್

★ ಜನಸಾಮಾನ್ಯರ ವೇದಾಂತ- ಗಾದೆಗಳು.

-ಜೇಮ್ಸ್ ಹೊವೆಲ್

★ ಮನುಷ್ಯನ ಗುರಿ ಅವನ ಶಕ್ತಿ ಮೀರಿದುದಾಗಿರಬೇಕು; ಇಲ್ಲವಾದಲ್ಲಿ ಸ್ವರ್ಗ ಎಂದರೇನರ್ಥ?

-ರಾಬರ್ಟ್ ಬ್ರೌನಿಂಗ್

★ ಪ್ರಪಂಚದಲ್ಲಿ ಮರಣವಿಲ್ಲದ ವರ ಪಡೆದಿರುವ ವಸ್ತು 'ಪುಸ್ತಕ.'

-ಗಯಟೆ